# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 745

ಸದಸ್ಯರ ಹೆಸರು : ಶ್ರೀ ಬಿ.ಕೆ ಹರಿಪ್ರಸಾದ್,

(ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 13.03.2025.

ಉತ್ತರಿಸುವ ಸಚಿವರು : ಗೃಹ ಸಚಿವರು.

| ಕ್ರಸ | ಪ್ರಶ್ನೆ | ಉತ್ತರ |
|---|---|---|
| 01 | ಮಂತ್ರಿಗಳು, ಸರ್ಕಾರಿ ಅಧಿಕಾರಿಗಳು (ಮಾಜಿ ಮಂತ್ರಿಗಳು ಮತ್ತು ನಿವೃತ್ತರು) ಶಾಸಕ ಸಂಸದರು (ಹಾಲಿ ಮತ್ತು ಮಾಜಿ)ಗಳು ಮಠಾಧೀಶರುಗಳನ್ನು ಹೊರತುಪಡಿಸಿ ರಾಜ್ಯದಲ್ಲಿ ವಿಶಲ್ ಬ್ಲೋಯರ್, ಪಿಟೀಷನರ್ಸ್ ಮತ್ತು ಮಾಹಿತಿ ಹಕ್ಕು ಕಾರ್ಯಕರ್ತರಿಗೆ ಕೊಲೆ ಬೆದರಿಕೆ ಹತ್ಯೆಯ ಸಂಚು ಹಿನ್ನೆಲೆಯಲ್ಲಿ ಪೊಲೀಸ್ ರಕ್ಷಣೆ ಒದಗಿಸಲಾಗಿದೆಯೇ? ಒದಗಿಸಲಾಗಿರುವ ವ್ಯಕ್ತಿಗಳ ಹೆಸರು, ವಿವರ ಮತ್ತು ಒಟ್ಟು ಸಂಖ್ಯೆ ಎಷ್ಟು? | ರಾಜ್ಯ ಅಂಗರಕ್ಷಕ ಭದ್ರತಾ ಪುನರ್ ವಿಮರ್ಶನಾ ಸಮಿತಿ ಕೈಗೊಂಡ ನಿರ್ಣಯದಂತೆ ಹಾಗೂ ಸ್ಥಳೀಯ ಪರಿಸ್ಥಿತಿ ಮತ್ತು ಬೆದರಿಕೆಯ ಸ್ವರೂಪಕ್ಕೆ ಅನುಗುಣವಾಗಿ ಸಮಿತಿಯ ನಿರ್ಣಯದ ನಿರೀಕ್ಷೆಯಲ್ಲಿ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದನ್ವಯ ವಿಶಲ್ ಬ್ಲೋಯರ್/ಪಿಟೀಷನರ್ಸ್/ ಆರ್‌ಟಿಐ ಕಾರ್ಯಕರ್ತರ ಪೈಕಿ ರಾಜ್ಯದಲ್ಲಿ ಒಟ್ಟು 05 ಆರ್.ಟಿ.ಐ. ಕಾರ್ಯಕರ್ತರಿಗೆ ಭದ್ರತೆಯನ್ನು ಒದಗಿಸಲಾಗಿರುತ್ತದೆ.<br><br>ರಕ್ಷಣೆಗೊಳಪಟ್ಟ ವ್ಯಕ್ತಿಗಳ ವೈಯಕ್ತಿಕ ವಿವರಗಳನ್ನು ಅವರ ಭದ್ರತೆಯ ಹಿತದೃಷ್ಟಿಯಿಂದ ತಡೆಹಿಡಿಯಲಾಗಿದೆ. |
| 02 | ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್.ಎಸ್.ಎಸ್) ನೊಂದಾಯಿತವಲ್ಲದ ಹಾಗೂ ಸ್ವಂತ ಅಥವಾ ಬಾಡಿಗೆ ಕಛೇರಿಗಳು ಇಲ್ಲವೆಂಬ ಮಾಹಿತಿ ಇದ್ದು, ಸರ್ಕಾರದಿಂದ ಕೇಶವಕೃಪ, ರಾಷ್ಟ್ರೋತ್ಥಾನ ಮತ್ತು ಯಾದವಸ್ಮೃತಿ ಕಟ್ಟಡಗಳಿಗೆ ಪೊಲೀಸ್ ರಕ್ಷಣೆ ಕೊಟ್ಟಿರುವುದು ನಿಜವೇ? ಈ ಕಟ್ಟಡಗಳಿಗೆ ಪೊಲೀಸ್ ರಕ್ಷಣೆ ಕೊಟ್ಟಿರುವ ಉದ್ದೇಶವೇನು? | ರಾಷ್ಟ್ರೋತ್ಥಾನ ಮತ್ತು ಯಾದವಸ್ಮೃತಿ ಕಟ್ಟಡಗಳ ಭದ್ರತೆ ದೃಷ್ಟಿಯಿಂದ ಬೆಂಗಳೂರು ನಗರದ ಸಿಎಆರ್(ಕೇಂದ್ರ) ಘಟಕದಿಂದ ರಕ್ಷಣೆ ಒದಗಿಸಲಾಗಿರುತ್ತದೆ. |

ಹೆಚ್‌ಡಿ 97 ಪಿಸಿಇ 2025

(signature)

**(ಡಾ: ಜಿ.ಪರಮೇಶ್ವರ)**

ಗೃಹ ಸಚಿವರು